# ೨ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

## ಸಿ.ಸಿ. 410/2022

ಸಾಕ್ಷಿದಾರರ ಹೇಳಿಕೆ ಃ

| | | |
|---|---|---|
| ಹೆಸರು | ಃ ಪ್ರಸನ್ನ | ಚಾಸಾಃ **7** ಫ್ರಾಸಾಃ **7** |
| ತಂದೆಯ ಹೆಸರು | ಃ ಕೆಂಪೇಗೌಡ | |
| ವಯಸ್ಸು | ಃ 43 ವರ್ಷ | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ದೊಡ್ಡಬ್ಯಾಡರಹಳ್ಳಿ ಗ್ರಾಮ | |

ದಿನಾಂಕಃ **24-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01.** ದಿಃ 16.09.2021 ರಂದು ನವಗ್ರಹ ಬಡಾವಣೆಗೆ ಸರ್ವೇಯರ್, ತಹಶೀಲ್ದಾರ್ ರವರು, ಆರ್.ಐ. ಶಂಕರ್, ಗೂಳಪ್ಪ ಬಂದಿದ್ದರು. ಸರ್ವೇ ಮಾಡಿ ಕಲ್ಲನ್ನು ನೆಟ್ಟಿದ್ದರು. ಸರ್ಕಾರಿ ಜಾಗದಲ್ಲಿ ವಾಟರ್ ಟ್ಯಾಂಕ್ ಮಾಡಲು ಗುರುತಿಸಿದ್ದರು. ಪಕ್ಕದ ಜಮೀನಿನ ದೇವರಾಜ ಮತ್ತು ಪ್ರಕಾಶರವರು ಮುಖಾಮುಖಿ ಮಾತುಕತೆ ನಡೆಸಿದರು. ತದನಂತರ ಪೊಲೀಸರು ಕಲ್ಲುಗಳನ್ನು ನೆಡಿಸಿದ್ದರು. ಮಾರನೇ ದಿನ ಬೆಳಗ್ಗೆ ನೋಡುವಷ್ಟರಲ್ಲಿ ಕಲ್ಲುಗಳು ಇರಲಿಲ್ಲ. ಯಾರೋ ಕಲ್ಲು ಕಿತ್ತು ಹಾಕಿದ್ದರು. ಚಾ.ಸಾ-5 ರವರು ಕಲ್ಲುಗಳನ್ನು ಕಿತ್ತುಹಾಕಿದ ಬಗ್ಗೆ ಪಿ.ಡಿ.ಒ. ರವರಿಗೆ ತಿಳಿಸಿದರು. ನಂತರ ಅದೇ ದಿನ ಪಂಚಾಯಿತಿ ಗೇಟ್ ಗೆ ಮಧ್ಯಾಹ್ನ

12.00 ರಿಂದ 1.30ರ ವರೆಗೂ ಯಾರೋ ಬೀಗ ಹಾಕಿದ್ದರು. ಸದರಿ ವಿಚಾರವನ್ನು ಚಾ.ಸಾ-2 ರವರು ಚಾ.ಸಾ-1 ರವರಿಗೆ ತಿಳಿಸಿದರು.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ**

**01.** ದೊಡ್ಡಬ್ಯಾಡರಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಟ್ಯಾಂಕ್ ಕಟ್ಟಲು ಗ್ರಾಮ ಪಂಚಾಯಿತಿ ವತಿಯಿಂದ ಹದ್ದುಬಸ್ತು ಅಳತೆ ಮಾಡಿಸಿ ಕಲ್ಲನ್ನು ನೆಟ್ಟಿದ್ದು, ದಿಃ16.09.2021 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಚಾ.ಸಾ- 5 ಮತ್ತು 6ರವರು ವಾಟರ್ ಟ್ಯಾಂಕ್ ನಿರ್ಮಾಣ ಮಾಡಲು ಪೂಜೆ ಮಾಡಿದ ಸ್ಥಳದಲ್ಲಿ ಇರುವಾಗ ಆರೋಪಿಗಳು ಬಂದು ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿದರು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಚಾ.ಸಾ-6ರವರು ಪಿ.ಡಿ.ಒ. ರವರಿಗೆ ತಿಳಿಸಿದರು ಎಂದರೆ ಸರಿಯಲ್ಲ. ತದನಂತರ ತಾಲ್ಲೂಕು ಕಛೇರಿಯ ಅಧಿಕಾರಿಗಳು ಬಂದು ಸ್ಥಳದಲ್ಲಿ ಸ್ಥಳ ಪರಿಶೀಲನೆ ಮಾಡಿದರು ಎಂದರೆ ಸರಿಯಲ್ಲ. ದಿಃ 17.09.2021 ರಂದು ಆರೋಪಿಗಳೆಲ್ಲ ಗ್ರಾಮ ಪಂಚಾಯಿತಿ ಕಛೇರಿಗೆ ಬಂದು ಚಾ.ಸಾ-2ರವರ ಮೇಲೆ ಜಗಳ ತೆಗೆದು ಕರ್ತವ್ಯ ನಿರ್ವಹಿಸದಂತೆ ಅಡಚಣೆ ಮಾಡಿದರು ಎಂದರೆ ಸರಿಯಲ್ಲ. ಆರೋಪಿಗಳು ಮಧ್ಯಾಹ್ನ 12.00 ರಿಂದ 1.00 ಗಂಟೆಯ ವರೆಗೆ ಕಛೇರಿಯ ಕಾಂಪೌಂಡ್ ಗೇಟ್ ಹಾಕಿ ಕರ್ತವ್ಯ ನಿರ್ವಹಿಸದಂತೆ ಅಡಚಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ 21.09.2021 ರಂದು ಈಗ ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-**4** ಎಂದು ಗುರುತಿಸಲಾಯಿತು. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಡಿ.ಆರ್.ಕೆ. ವಕೀಲರಿಂದಃ

**01.** ಸರ್ವೇ ನಂಬರ್-57 ಪಂಚಾಯಿತಿಗೆ ಸಂಬಂದಿಸಿದ್ದು, ಸರ್ವೇ ನಂಬರ್-56 ದೇವರಾಜು ಮತ್ತು ಲಿಂಗರಾಜುರವರಿಗೆ ಸೇರಿದ್ದು. ಸರ್ವೇ ನಂಬರ್-57 ನ್ನು ಅಳತೆ ಮಾಡಲು ಬಂದಾಗ ಅಕ್ಕಪಕ್ಕ ಜಮೀನಿನ ಮಾಲೀಕರಿಗೆ ನೋಟೀಸ್ ನೀಡಿದ್ದರು. ಪಂಚಾಯಿತಿ ಮತ್ತು ಸರ್ವೇಯರ್ ಕಡೆಯಿಂದ ನೋಟೀಸ್ ನೀಡಿದ್ದರು. ಆ ರೀತಿ ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಸರ್ವೇ ನಂಬರ್-56 ದೇವರಾಜು ಮತ್ತು ಲಿಂಗರಾಜುರವರ ತಾಯಿ ನಾಗಮ್ಮನಿಗೆ ಸೇರಿದ್ದು ಎಂದರೆ ಸರಿ. ಸರ್ವೇ ನಂ-57 ನ್ನು ಅಳತೆ ಮಾಡುವ ಬದಲು ಆರೋಪಿಗಳಿಗೆ ಸೇರಿದ ಸರ್ವೇ ನಂ-56 ನ್ನು ಅಳತೆ ಮಾಡಿ ಕಲ್ಲನ್ನು ನೆಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಗಳು ತಮ್ಮ ಜಮೀನನ್ನು ಬಿಟ್ಟು ಅಳತೆ ಮಾಡಲು ಹೇಳಿದರು ಎಂದರೆ ಸರಿಯಲ್ಲ. ಸರ್ವೇ ನಂ-57/2 ರಲ್ಲಿ ದೇವರಾಜು, ತಿಮ್ಮಮ್ಮ, ನಿಂಗಣ್ಣ, ಡಿ.ಸಿ. ಧರ್ಮಲಿಂಗು ರವರು ಮಾಲೀಕರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಪಂಚಾಯಿತಿಯಿಂದ ನೋಟೀಸ್ ಕೊಟ್ಟಿದ್ದಾರೊ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರದಿದ್ದರು ಚಾ.ಸಾ-1 ಮತ್ತು 2 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**